# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಆಗಸ್ಟ್ 2024
ಸಂಪುಟ 20 ಸಂಚಿಕೆ 08

ಸಂಚಿಕೆ ಬೆಲೆ ರೂ. 1/–

info@buntsanghablr.com
buntsanghabangalore@yahoo.in



Office Bearers & EC members 2022-24




Annual General Body Meeting



Elections for 2024-26




Gnana Yagna program by Chinmaya Mission

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

#324, Bunt's Sangha Complex
Chord Road, Vijayanagar
Bengaluru - 560 040.
Ph: 080 2339 9323/ 2339 9635
E: info@buntsanghablr.com





*Sharath M.*

**97311 30116**
**82174 49819**

# SRI BRAHMI CATERERS

Cooking and Catering Contractor, Hirers of Vessels & Shamiyana



Ground, #48, 8th Cross, 1st Main, Mysore Road, K.B. Nagar, Pipeline West, Chamarajpet, Bengaluru - 26

ADVT.

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 20** **AUGUST - 2024** **ISSUE 08**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.
**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.
**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ
**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್. ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ
**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ನಿಕಟ ಪೂರ್ವ ಅಧ್ಯಕ್ಷರ ಮಾತು | 3 |
| **From the Desk of M. Muralidhar Hegde** | 4 |
| ನೂತನ ಅಧ್ಯಕ್ಷರ ಮಾತು | 5 |
| ನಿಕಟ ಪೂರ್ವ ಗೌರವ ಕಾರ್ಯದರ್ಶಿಯವರ ವರದಿ | 6 |
| ನೂತನ ಗೌರವ ಕಾರ್ಯದರ್ಶಿಯವರ ಮಾತು | 7 |
| ಅಯೋಧ್ಯೆ – ಪುರಾಣ ಕಾಲದ ರಾಮರಾಜ್ಯ | 9 |
| **Namaste : Sacred Greeting and its profound Significance** | 12 |
| ಇಕಿಗಾಯಿ ಎನ್ನುವ ದೀರ್ಘಾಯುವಿನ ರಹಸ್ಯ | 14 |
| **Matrimonial Services** | 16 |
| ಬಂಟರ ಸಂಘ ಬೆಂಗಳೂರು–2024–26ನೇ ಸಾಲಿಗೆ ನೂತನವಾಗಿ ಆಯ್ಕೆಗೊಂಡ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು | 22 |

### ಮುಖ ಪುಟ

**Office Bearers & EC Members 2022-24**
**Annual General Body Meeting**
**Elections for 2024-26**
**Gnana Yagna Program by Chinmaya Mission**

# ಸಂಪಾದಕೀಯ



ಎಲ್ಲರ ಜೀವನದಲ್ಲೂ ಕೆಲವೊಂದು ಅಪರೂಪದ ಅವಕಾಶಗಳು ಬಂದು ಹೋಗುತ್ತವೆ. ಒಂದು ತರಹ ರೈಲು ಚಲಿಸುತ್ತಾ ಇದ್ದ ಹಾಗೆ. ರೈಲು ಯಾವಾಗ ಹತ್ತಬೇಕು, ಯಾವಾಗ ಇಳಿಯಬೇಕೆಂಬುದು ನಮ್ಮ ಆಯ್ಕೆ. ಹಾಗೆಯೇ ಅವಕಾಶಗಳನ್ನು ಉಪಯೋಗಿಸಿಕೊಳ್ಳುವುದು ನಮ್ಮ ನಮ್ಮ ಆಯ್ಕೆಯಾಗಿರಬೇಕು. ಈ ಅವಕಾಶಗಳ ಅನುಭವ ನಮಗೆ ಮೊದಲನೆಯದ್ದೇ ಆಗಿರಬಹುದು ಅಥವಾ ಈ ಹಿಂದೆ ಬಂದು ಹೋಗಿರಬಹುದು. ಒಂದು ವೇಳೆ ಅದು ಮೊದಲನೆಯದ್ದೇ ಆಗಿದ್ದರೆ, ನಾವು ಸ್ವಲ್ಪ ಜಾಗರೂಕತೆಯಿಂದ ಆ ಕೆಲಸ ಮಾಡಬೇಕು ಅಥವಾ ಬೇರೆಯವರಿಂದ ಸಲಹೆ–ಸೂಚನೆಗಳನ್ನು ಕೇಳಬಹುದು. ಆದರೆ ಇಂತಹ ಅವಕಾಶಗಳು ಬಂದಾಗ ಹೆದರಿಕೊಂಡರೆ ಹೇಗೆ? ನಾವು ಎಷ್ಟೇ ಅನುಭವಿಗಳಾಗಿದ್ದರೂ ಹಿಂದೊಮ್ಮೆ ಯಾವುದೋ ಒಂದು ಅನುಭವವು ನಮಗೆ ಮೊದಲನೆಯದ್ದೇ ಆಗಿರುತ್ತದೆ. ಆದರೆ ಆ ಕೆಲಸದಲ್ಲಿ ನಾವು ಶ್ರದ್ಧೆಯಿಂದ ಮನಸ್ಸಿಟ್ಟು ತಲ್ಲೀನರಾದರೆ ನಾವು ಆ ಕೆಲಸದಲ್ಲಿ ಸೈ ಎನಿಸಿಕೊಳ್ಳುವುದರಲ್ಲಿ ಏನೂ ಸಂದೇಹವಿಲ್ಲ.

ಕೆಲವೊಂದು ಅವಕಾಶಗಳು ಒದಗಿ ಬಂದಾಗ ನಾವು ಅದನ್ನು ಹೇಗೆ ನಿಭಾಯಿಸುತ್ತೇವೆ? ನಿಜವಾಗಿಯೂ ನಾವು ಅತ್ಯಂತ ಶ್ರದ್ಧೆಯಿಂದ ಅದನ್ನು ಮಾಡಿದ್ದೇವೆಯೋ ಅಥವಾ ಸುಮ್ಮನೆ ಕಾಟಾಚಾರಕ್ಕೆ ಮಾಡಿದ್ದೇವೋ ಎಂದು ತಿಳಿದುಕೊಳ್ಳಬೇಕು. ಅದೇ ರೀತಿ ನಾವು ಬೆಂಗಳೂರು ಬಂಟರ ಸಂಘಕ್ಕೆ ಬಂದಾಗ, ನಮ್ಮ ಪಾಲಿಗೆ ಬಂದ ಕೆಲಸಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಬೇಕು. ಏಕೆಂದರೆ ಪ್ರತೀ ಎರಡು ವರ್ಷಗಳಿಗೊಮ್ಮೆ ಹೊಸ ತಂಡ ಬರುವುದರಿಂದ ಪ್ರತೀ ಬಾರಿಯೂ ಸಂಘವು ಪ್ರಗತಿಯನ್ನು ಕಾಣಬೇಕಾಗಿದೆ. ಅಂದರೆ ನಮ್ಮ ನಮ್ಮ ಅವಧಿಯಲ್ಲಿ ನಮ್ಮಿಂದ ಸಾಧ್ಯವಾದಷ್ಟು ಕೆಲಸ ಮಾಡಿ ನಮ್ಮ ಸೇವೆಯನ್ನು ಸಂಘಕ್ಕೆ ಸಲ್ಲಿಸಬೇಕು.

2024–26 ನೇ ಸಾಲಿನ ಆಡಳಿತ ಮಂಡಳಿ ಶ್ರೀಯುತ C.A. ಅಶೋಕ್ ಶೆಟ್ಟಿಯವರ ನೇತೃತ್ವದಲ್ಲಿ ಆಯ್ಕೆಯಾಗಿ ಬಂದಿದೆ. ಈ ಎಲ್ಲಾ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಂದ ಉತ್ತಮ ಕೆಲಸಗಳು ನಡೆದು ಸಂಘವು ಪ್ರಗತಿಯನ್ನು ಕಾಣಲಿ, ಅನೇಕ ಸಮಾಜ ಬಾಂಧವರಿಗೆ ಸಂಘದ ಸಹಾಯಹಸ್ತ ದೊರಕಲಿ, ಪಾರದರ್ಶಕವಾದ ಆಡಳಿತ ಸಂಘಕ್ಕೆ ದೊರೆಯಲಿ ಹಾಗೂ ಎರಡೂ ಶಾಲೆಗಳು ಅತ್ಯುತ್ತಮ ಹೆಸರು ಗಳಿಸಲಿ ಎಂದು ಹಾರೈಸೋಣ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ನನಗೆ ದೊರಕಿದ ಅವಕಾಶಕ್ಕಾಗಿ ಸಂಘದ 2022–24 ನೇ ಸಾಲಿನ ಅಧ್ಯಕ್ಷರಾದ ಶ್ರೀ ಮುರಲೀಧರ ಹೆಗ್ಡೆಯವರಿಗೆ, ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೆ ವಂದಿಸುತ್ತಾ, ಸಂಘದ ಕಛೇರಿಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಹೃದಯಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ನನ್ನ ಸಂಪಾದಕೀಯ ಬರವಣಿಗೆಯಲ್ಲಿ ಏನಾದರೂ ತಪ್ಪುಗಳಾಗಿದ್ದಲ್ಲಿ ಕ್ಷಮೆ ಇರಲಿ. 2024–26 ನೇ ಸಾಲಿನ ಸಂಪಾದಕರಿಗೂ, ಸಂಪಾದಕೀಯ ಮಂಡಳಿಗೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಂದ ಸಂಘದಲ್ಲಿ ಉತ್ತಮ ಕೆಲಸಗಳು ನಿರ್ವಿಘ್ನವಾಗಿ ಜರುಗಲಿ ಎಂದು ಹಾರೈಸುತ್ತಾ, ಸರ್ವರಿಗೂ ಶ್ರೀ ವರಸಿದ್ಧಿ ವಿನಾಯಕನ ಆಶೀರ್ವಾದವಿರಲಿ ಎಂದು ಹಾರೈಸುತ್ತೇನೆ.

ಅರವಿಂದ ಶೆಟ್ಟಿ ಎಂ.

# ನಿಕಟ ಪೂರ್ವ ಅಧ್ಯಕ್ಷರ ಮಾತು



ಪ್ರೀತಿಯ ಸಮಾಜ ಬಾಂಧವರೇ,

ನೂತನವಾಗಿ ಆಯ್ಕೆಗೊಂಡ ಸಂಘದ ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, 2024-26 ನೇ ಸಾಲಿನ ಅವರ ಆಡಳಿತಾವಧಿಯಲ್ಲಿ ಸಂಘವು ಉತ್ತಮ ಬೆಳವಣಿಗೆ ಹೊಂದಲಿ ಎಂದು ಆಶಿಸುತ್ತೇನೆ.

2022 ರ ಚುನಾವಣೆಯಲ್ಲಿ ನಾನು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಕೆಲವೊಂದು ಭರವಸೆಗಳನ್ನು ನೀಡಿದ್ದೆ. ಬಂಟ್ಸ್ ಹೆರಿಟೇಜ್, ಹಿರಿಯ ಬಂಟ ನಾಗರಿಕರ ವಾಸಸ್ಥಾನ, ಆಯುರ್ವೇದಿಕ್ ಕಾಲೇಜು ಹಾಗೂ ಶಾಶ್ವತ ನಿಧಿ ಸ್ಥಾಪನೆ. ಇದಕ್ಕೆ ಬೇಕಾದಂತೆ 3 ರಿಂದ 5 ಎಕರೆ ಜಾಗ ಖರೀದಿಸಲು ಅನೇಕ ಸ್ಥಳಗಳಿಗೆ ನಾವು ಭೇಟಿ ನೀಡಿದ್ದೆವು. ಸ್ಥಳ ಖರೀದಿ ಸಮಿತಿಯನ್ನು ರಚಿಸಲಾಗಿತ್ತು. ಆದರೆ ಈ ನಡುವೆ ನಮ್ಮ ವಿಜಯನಗರ ಸಂಕೀರ್ಣದಲ್ಲಿ ಒಂದು ಬೃಹತ್ ಯೋಜನೆಯ ಅಂದಾಜು ಮಾಡಿ, ಖ್ಯಾತ ಆರ್ಕಿಟೆಕ್ಟ್‌ರಿಂದ ಪ್ಲಾನ್, ಎಲಿವೇಷನ್‌ಗಳನ್ನು ಸಿದ್ಧಪಡಿಸಿ, ಚರ್ಚಿಸಲಾಯಿತು. ಈ ಯೋಜನೆಯ ಅಂದಾಜು ವೆಚ್ಚ ಸುಮಾರು 200 ಕೋಟಿಯಾಗಿತ್ತು. ಸುಮಾರು 2000 ಜನರಿಗಾಗುವ ಸಭಾಂಗಣ, 120 ಕೊಠಡಿಗಳ ಸುಸಜ್ಜಿತ ಶಾಲೆ, 850 ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಹಾಗೂ ಒಂದು ಬೃಹತ್ ವಾಣಿಜ್ಯ ಸಂಕೀರ್ಣವನ್ನು ಒಳಗೊಂಡ ಯೋಜನೆ ಇದಾಗಿತ್ತು.

ಆದರೆ, ಈ ನಡುವೆ ಅನೇಕ ವ್ಯತಿರಿಕ್ತ ಟೀಕೆ-ಟಿಪ್ಪಣಿಗಳು ನಮ್ಮ ಕಿವಿಗೆ ಬೀಳಲಾರಂಭಿಸಿದವು. ಇಷ್ಟು ದೊಡ್ಡ ಪ್ರಾಜೆಕ್ಟ್ ಏಕೆ, ವಾಣಿಜ್ಯ ಸಂಕೀರ್ಣ ಏಕೆ, ಹಣ ಎಲ್ಲಿಂದ ತರುವುದು ಎಂಬಿತ್ಯಾದಿ ಮಾತುಗಳು ಹರಿದಾಡಲಾರಂಭಿಸಿದವು. ಪರಿಣಾಮ- ಯೋಜನೆಯನ್ನು ಸದ್ಯಕ್ಕೆ ಕೈಬಿಡಲಾಯಿತು. ಇಷ್ಟೆಲ್ಲಾ ತಯಾರಿಗೆ ಸುಮಾರು 7 ತಿಂಗಳ ಸಮಯವೇ ಬೇಕಾಯಿತು. ಇದೇ ಸಮಯದಲ್ಲಿ ಸಂಘದ ಒಳಗೆ ಏನೋ ವಂಚನೆಯ ವಿಷಯ ಬರಲಾರಂಭಿಸಿ, ಇದರ ಬಗ್ಗೆ ನಾವು ಕಾರ್ಯ ಪ್ರವೃತ್ತರಾಗಿ, ವಿಚಾರಣಾ ಸಮಿತಿಯನ್ನು ರಚಿಸಿ ಇದರ ಜಾಡು ಹಿಡಿಯಲಾಯಿತು. ಒಂದು ರೆವಿನ್ಯೂ ಆಡಿಟ್ ಕೂಡಾ ಮಾಡಿಸಿ, ಅನೇಕ ವಿಷಯಗಳನ್ನು ಬಯಲಿಗೆಳೆದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಯಿತು. ಇದೆಲ್ಲದರ ಬಗ್ಗೆಯೂ ನಾವು ಅನೇಕ ಟೀಕೆ-ಟಿಪ್ಪಣಿಗಳನ್ನು ಎದುರಿಸುವಂತಾಯಿತು. ಆದರೆ ಇದ್ಯಾವುದಕ್ಕೂ ನಾವು ಹೆದರದೇ ತಕ್ಕ ಕ್ರಮ ಕೈಗೊಂಡಿದ್ದೇವೆ.

2022-24 ನೇ ಸಾಲಿನ ಖಜಾಂಚಿಗಳಾದ ಶ್ರೀ ಅಮರನಾಥ್ ಶೆಟ್ಟಿಯವರು ಅಕೌಂಟ್ ವಿಭಾಗದಲ್ಲಿ ಪಾರದರ್ಶಕತೆಯನ್ನು ಅಳವಡಿಸುವಲ್ಲಿ ಸಾಕಷ್ಟು ಶ್ರಮಿಸಿದ್ದಾರೆ. ಸಂಘ ಹಾಗೂ ಶಾಲೆಯಲ್ಲಿ ನಗದು ರಹಿತ ವ್ಯವಹಾರವನ್ನು ತಂದಿರುವುದು ಒಂದು ದೊಡ್ಡ ಸಾಧನೆ. ತನ್ಮೂಲಕ 2023-24 ರ ಬ್ಯಾಲೆನ್ಸ್ ಶೀಟ್ ಹಾಗೂ ಪಿ.ಎಲ್. ಅಕೌಂಟ್ ನಲ್ಲಿ ಕ್ಯಾಶ್ ಬ್ಯಾಲೆನ್ಸ್- ಜೀರೋ ಬ್ಯಾಲೆನ್ಸ್ ಆಗಿರುತ್ತದೆ. ಶಾಲೆ ಹಾಗೂ ಸಂಘದ ಅಕೌಂಟ್ ವಿಭಾಗದಲ್ಲಿ ಮೇಕರ್-ಚೆಕರ್ ಸೇವೆ, ವೋಚರ್ ಡಿಲೀಟ್ ಆಪ್ಷನ್ ತೆಗೆದಿರುವುದು, ಸಭಾಂಗಣದ ಟ್ಯಾರೀಫ್ ಕಾರ್ಡ್ ನಲ್ಲಿ ಮಾರ್ಪಾಡು, ಆನ್ಲೈನ್ ಬುಕಿಂಗ್ ಸೇವೆ, ಹಾಸ್ಟೆಲ್ ಗಳು, ಮಿನಿ ಹಾಲ್, ಗೆಸ್ಟ್ ರೂಮ್ ಗಳು ಹಾಗೂ ವಿದ್ಯಾರ್ಥಿವೇತನ ಸೇವೆಗಾಗಿ ಆನ್-ಲೈನ್ ಬುಕಿಂಗ್ ಸೇವೆಯ ಕ್ರಮ ಕೈಗೊಳ್ಳಲಾಗಿದೆ.

ಪರ್ಚೇಸ್ ಆರ್ಡರ್ ನಲ್ಲಿ ನಂಬರಿಂಗ್ ಹಾಗೂ ಪಾರದರ್ಶಕತೆ, ವೇತನ ವಿಭಾಗದಲ್ಲಿ ಮಾರ್ಪಾಡು, ಶಾಲೆಯ ಪುಸ್ತಕ ವಿಭಾಗದಲ್ಲಿ ಮಾರ್ಪಾಡು, ಶಾಲೆಯ ಪುಸ್ತಕ ವಿಭಾಗದ ಖರೀದಿಯಲ್ಲಿ ಸುಮಾರು 70 ಲಕ್ಷಕ್ಕೂ ಮಿಗಿಲಾಗಿ ಡಿಸ್ಕೌಂಟ್ ಬಂದಿರುವುದು ಸಂತಸ ತಂದಿದೆ. ಈ ಎಲ್ಲಾ ಬದಲಾವಣೆ ಹಾಗೂ ಪಾರದರ್ಶಕತೆಯಿಂದ ಸಂಘವು ಮುಂದಿನ ದಿನಗಳಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗಲು ನೆರವಾಗಲಿದೆ.

ಸಂಘದ ಎಲ್ಲಾ ಉಪಸಮಿತಿಗಳಿಂದ ಅನೇಕ ಕಾರ್ಯಕ್ರಮಗಳು ನಡೆದಿವೆ. ಎರಡೂ ಶಾಲೆಗಳಲ್ಲಿ ಅಧ್ಯಾಪಕರ ನೇಮಕಾತಿ ಹಾಗೂ ಇತರ ನಿರಂತರ ಕೆಲಸಗಳು ನಡೆಯಿತು. ಯಲಚಗುಪ್ಪೆ ಸಂಕೀರ್ಣದಲ್ಲಿ ಬಾಕಿ ಉಳಿದಿದ್ದ ಕಟ್ಟಡ ನಿರ್ಮಾಣ, ಕಾಂಪೌಂಡ್ ಗೋಡೆಗಳ ನಿರ್ಮಾಣದ ಕೆಲಸ ಹಾಗೂ ಇತರ ರಿಪೇರಿ ಕೆಲಸಗಳನ್ನು ಕೈಗೊಳ್ಳಲಾಯಿತು. ಶಾಲೆಯ ಅನೇಕ ಸಮಸ್ಯೆಗಳನ್ನು ನಿವಾರಿಸಿ, ಅನೇಕ ಸುಧಾರಣೆಗಳನ್ನು ತರಲಾಯಿತು. ನಾವು ಅಂದುಕೊಂಡಂತೆ, ಹೊಸ ಪ್ರಾಜೆಕ್ಟ್‌ಗಳನ್ನು ಮಾಡಲು ಸಾಧ್ಯವಾಗದಿದ್ದರಿಂದ ನನಗೆ ಬೇಸರವಿದ್ದರೂ, ಸಂಘವನ್ನು ಶುಚಿಗೊಳಿಸಿದ ತೃಪ್ತಿ ನನಗಿದೆ. ವಂಚನೆಯಲ್ಲಿ ಭಾಗಿಯಾಗಿರುವ ಜನರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಿದ ತೃಪ್ತಿ ನಮಗಿದೆ. ಏನೇ ಇರಲಿ, ನಾವು ಸಂಘದಲ್ಲಿ ಸಿಬ್ಬಂದಿಯಾಗಿ ಅಥವಾ ಚುನಾಯಿತರಾಗಿ ಬಂದಲ್ಲಿ, ಸಂಘದ ಏಳಿಗೆಗಾಗಿ ನಾವು ಕೆಲಸ ಮಾಡಬೇಕೇ ವಿನಹ, ಸಂಘದಿಂದ ನಮ್ಮ ಘನತೆ ಹೆಚ್ಚಾಗಬೇಕೆಂದು ಬಯಸಬಾರದು. ಸಂಘಕ್ಕೆ ನಾವು ಯಾವಾಗಲೂ ನಿಷ್ಠಾವಂತರಾಗಿರಬೇಕು.

ನಮ್ಮ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ, ಉಪಸಮಿತಿಯ ಎಲ್ಲಾ ಸದಸ್ಯರಿಗೆ, ಶಾಲಾಡಳಿತ ಮಂಡಳಿ (GC) ಚೇರ್‌ಮನ್ ಹಾಗೂ ಸದಸ್ಯರಿಗೆ ಮತ್ತು ಶಾಲೆಯ ಎಲ್ಲಾ ಅಧ್ಯಾಪಕರಿಗೆ, ಶಾಲೆಯ ಹಾಗೂ ಸಂಘದ ಸಿಬ್ಬಂದಿಗಳಿಗೆ ತುಂಬು ಹೃದಯದ ಧನ್ಯವಾದಗಳನ್ನು ನಾನು ಈ ಮೂಲಕ ಸಮರ್ಪಿಸುತ್ತಿದ್ದೇನೆ.

ಸರ್ವ ಸದಸ್ಯರಿಗೂ ಶ್ರೀ ವರಸಿದ್ಧಿ ವಿನಾಯಕನು ಒಳ್ಳೆಯದನ್ನು ಮಾಡಲಿ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು, 2022–24

hegdemm@gmail.com

# From the Desk of M. Muralidhar Hegde President - 2022-2024



**Respected Members,**

During the 2022 elections, I promised to acquire land for an old age home, establish an Ayurvedic College, and create a permanent educational fund. While these goals seemed achievable, unforeseen challenges arose that delayed our progress.

Our initial plans were set aside when a more significant project worth nearly 200 crores was proposed. This plan aimed to enhance the existing Sangha's structures and amenities to meet today's demands and accommodate larger crowds. It involved demolishing existing structures at our Vijayanagar campus to construct a new auditorium with a 2000-person capacity, a school with 120 classrooms, parking for 850 cars, and a commercial complex with a high-rise building. Despite having detailed plans and multiple discussions, we faced significant opposition regarding the demolition of existing facilities. This controversy halted our plans and cost us nearly seven months.

In our search for suitable land, we inspected several plots but couldn't finalize any due to specific requirements. Concurrently, we discovered fraudulent activities within the Sangha, prompting us to conduct thorough inquiries and revenue audits, leading to strict actions against the culprits. This process took around six months. The presence of these fraudulent activities made it impossible to seek donations for our new projects.

Although I couldn't fulfill all my promises, we successfully addressed the fraud issue, implementing stringent financial controls, cashless transactions, and oversight on various Sangha activities. These reforms, albeit delayed, have now fortified our organization. Additionally, we resolved several issues in our schools by recruiting experienced and knowledgeable teachers through fair and strict interviews. The pending construction at Yelacheguppe campus is progressing, along with various repair works at both schools.

Mr. Amarnath Shetty, our Treasurer, has made remarkable strides in enhancing transparency within our Accounts Department. Under his leadership, we've successfully transitioned to cashless transactions across the Sangha and schools, resulting in a zero cash balance on our balance sheet and profit and loss account. Key initiatives like the implementation of a maker-checker system, the removal of the voucher delete option, and the restructuring of the auditorium rate card have significantly improved our financial processes.

Additionally, the introduction of online booking facilities for the gents and ladies hotels, auditorium, mini hall, guest rooms, and scholarship services has streamlined operations. His efforts in ensuring transparency through numbered purchase orders and implementing reforms in salaries and the book purchasing department have led to substantial savings, amounting to over Rs.70 lakhs for the organization.

As members of the Sangha, it is crucial to prioritize the organization's welfare over personal gains. We must honor the vision of our founders by working earnestly for the Sangha's betterment.

I congratulate the new team of Office Bearers and EC members elected for 2024-26. I trust they will continue our initiatives and introduce new projects, taking the Sangha to greater heights. I pray for their strength and success.

I extend my gratitude to our Office Bearers, EC members, Sub-committee members, Sangha staff, and school staff for their cooperation and support. Thank you to all esteemed members for granting me the opportunity to serve as the President of Bunts' Sangha Bangalore.

God bless everyone.

**M. Muralidhar Hegde**
President, 2022-24

# ನೂತನ ಅಧ್ಯಕ್ಷರ ಮಾತು
## ನಮ್ಮ ಚಿಂತನೆಯ ಚಿತ್ತ ಸಮಾಜದತ್ತ



ಪ್ರಿಯರೇ,

ಮುಂದಿನ ಎರಡು ವರ್ಷಗಳ ಕಾಲ, ಬಂಟರ ಸಂಘವನ್ನು ಮುನ್ನಡೆಸಲು ನಮ್ಮ ಮೇಲೆ ನಂಬಿಕೆಯಿಟ್ಟು ನನ್ನನ್ನು ಅಧ್ಯಕ್ಷನಾಗಿ ಹಾಗೂ ನಮ್ಮ ತಂಡವನ್ನು ಆರಿಸಿರುವುದಕ್ಕಾಗಿ ಪ್ರತಿಯೊಬ್ಬರಿಗೂ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ನಾನು ಮತ್ತು ನಮ್ಮ ತಂಡ ಈ ಜವಾಬ್ದಾರಿಯನ್ನು ನಮ್ರತೆಯಿಂದ ಸ್ವೀಕರಿಸುತ್ತಾ, ಸದಸ್ಯರ ಸಂತೃಪ್ತಿಗಾಗಿ ಸಂಘ ಮತ್ತು ಶಾಲೆಯ ಕಾರ್ಯ ನಿರ್ವಹಣೆಯನ್ನು ಸುಗಮಗೊಳಿಸಲು ಶ್ರಮಿಸುತ್ತೇವೆ.

ನಾವು ನಮ್ಮ ಶೈಕ್ಷಣಿಕ ಸಂಸ್ಥೆಯ ಉನ್ನತಿಯನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯುವ ಎಲ್ಲಾ ಪ್ರಯತ್ನಗಳನ್ನು ಮಾಡಲಿದ್ದೇವೆ. ಪ್ರತಿಯೊಬ್ಬ ಸದಸ್ಯರ ಬೆಂಬಲದೊಂದಿಗೆ, 2 ಕೋಟಿಗಿಂತಲೂ ಅಧಿಕ ಶೈಕ್ಷಣಿಕ ಕಾರ್ಪಸ್ ಫಂಡ್ ನಿರ್ವಹಿಸಿ, ಈಗ ಇರುವ 2 ಕೋಟಿ ಫಂಡಿಗೆ ಸೇರಿಸಿ, ಆ ಮೂಲಕ ಆದ್ಯತೆಯ ಮೇರೆಗೆ ಅಸಹಾಯಕರಿಗೆ ಮತ್ತು ಅರ್ಹರಿಗೆ ಹಣಕಾಸಿನ ಅವಶ್ಯಕತೆಗಳನ್ನು ಈಡೇರಿಸಲು ಬಯಸಿದ್ದೇವೆ. ಬಂಟರ ಸಂಘಕ್ಕೆ ಕನಿಷ್ಠ ಪಕ್ಷ 20 ರಿಂದ 25 ಎಕರೆಯಷ್ಟು ಜಾಗವನ್ನು (ಲ್ಯಾಂಡ್ ಬ್ಯಾಂಕ್) ಖರೀದಿ ಮಾಡುವ ಯೋಜನೆ ಮಾಡಿದ್ದೇವೆ. ಬಂಟ ನಿರುದ್ಯೋಗಿಗಳಿಗೆ ಸರಿಯಾದ ಉದ್ಯೋಗವನ್ನು ಒದಗಿಸುವ ನಿಟ್ಟಿನಲ್ಲಿ ಪೂರಕ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯಿದೆ. ಇದಕ್ಕಾಗಿ ಪೂರಕ ಮತ್ತು ಪ್ರಯೋಜನಕಾರಿ ವಾತಾವರಣವನ್ನು ಸೃಷ್ಟಿಸಿ, ಅಗತ್ಯವಿದ್ದಲ್ಲಿ ವಿವಿಧ ಸಮ್ಮೇಳನಗಳನ್ನು ನಡೆಸಲು ನಿರ್ಧರಿಸುತ್ತೇವೆ. ವಿದ್ಯಾರ್ಥಿವೇತನಕ್ಕಾಗಿ ನಿಜವಾದ ಅರ್ಹ ವಿದ್ಯಾರ್ಥಿಗಳ ಸರಿಯಾದ ಗುರುತಿಸುವಿಕೆ, ವೈದ್ಯಕೀಯ ಚಟುವಟಿಕೆಗಳು, ವಿದ್ಯಾರ್ಥಿವೇತನ ಹಾಗೂ ಕರಿಮಣಿ ಫಲಾನುಭವಿಗಳಿಗೆ ನೇರ ವರ್ಗಾವಣೆ ನಮ್ಮ ಕಾರ್ಯಸೂಚಿಯಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಕಲೆ ಮತ್ತು ಅದರ ವಿವಿಧ ಪ್ರಾಕಾರಗಳನ್ನು ಪ್ರೋತ್ಸಾಹಿಸುವ ಉದ್ದೇಶಕ್ಕಾಗಿ ಅಲ್ಲಲ್ಲಿ ಕಾರ್ಯಕ್ರಮಗಳನ್ನು ಯೋಜಿಸುವ ಉದ್ದೇಶವಿದೆ.

ಈಗಾಗಲೇ ಕಳೆದ 15 ದಿನಗಳಿಂದ ನಾವು ಪೋಷಕರ ದೃಷ್ಟಿಕೋನದಿಂದ ಶಾಲೆಯ ಕಾಳಜಿಯನ್ನು ಅರ್ಥಮಾಡಿಕೊಳ್ಳಲು ನಾವು ಈಗಾಗಲೇ ಸದಸ್ಯರ ಪೋಷಕರ ಸಭೆಗಳನ್ನು ಕರೆದು ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಾರಂಭಿಸಿದ್ದೇವೆ. ಹಿಂದಿನ ತಂಡ ಲೆಕ್ಕಪತ್ರ ಡಿಜಿಟಲೈಸ್ ಮಾಡುವ ವ್ಯವಸ್ಥೆ ಮತ್ತು ಹೊಸ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸಿದ್ದರು. ಎಸ್.ಒ.ಪಿ. ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಸ್ಥಾಪಿಸಲು, ನಾವು ಆಂತರಿಕ ಲೆಕ್ಕಪರಿಶೋಧಕರೊಂದಿಗೆ ದೈನಂದಿನ ಸಭೆಗಳನ್ನು ನಡೆಸುತ್ತಿದ್ದೇವೆ. ವಾರ್ಷಿಕ ಮಹಾಸಭೆಯ ಸಲಹೆಗಳಿಗೆ ಸಂಬಂಧಿಸಿದಂತೆ, ನಾವು ಶೋಧನಾ ಸಮಿತಿಯೊಂದಿಗೆ ಸಂವಹನವನ್ನು ಪ್ರಾರಂಭಿಸಿದ್ದೇವೆ. ಇದಕ್ಕೆಲ್ಲಾ ಪೂರಕ ಸ್ಪಂದನೆ ವ್ಯಕ್ತವಾಗುತ್ತಿದೆ.

ಈ ಪ್ರತಿಯೊಂದು ಚಟುವಟಿಕೆಗಳಿಗಾಗಿ ನಾವು ನಿಮ್ಮನ್ನು ಸಂಪರ್ಕಿಸುತ್ತೇವೆ. ಮೇಲಿನ ಉದ್ದೇಶಗಳನ್ನು ಸಾಧಿಸಲು ನಾವು ಪ್ರಯತ್ನಿಸುತ್ತಿರುವಾಗ ನಮ್ಮನ್ನು ಬೆಂಬಲಿಸಲು, ಸೂಕ್ತ ಮಾರ್ಗದರ್ಶನ ನೀಡಲು ಮತ್ತು ಸರಿಪಡಿಸಲು ಸದಾ ನಿಮ್ಮೆಲ್ಲರ ಬೆಂಬಲವನ್ನು ವಿನಮ್ರವಾಗಿ ವಿನಂತಿಸುತ್ತಿದ್ದೇವೆ.

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು, 2024–26

# ನಿಕಟಪೂರ್ವ ಗೌರವ ಕಾರ್ಯದರ್ಶಿಯವರ ಮಾತು

**ಸಮುದಾಯ ಬಾಂಧವರಿಗೆ
ಸ್ವಾತಂತ್ರ್ಯ ದಿನಾಚರಣೆಯ
ಹಾಗೂ
ಗೌರಿ ಗಣೇಶ ಹಬ್ಬದ
ಹಾರ್ದಿಕ ಶುಭಾಶಯಗಳು**



ಬೆಂಗಳೂರು ಬಂಟರ ಸಂಘದ 2022-24ನೇ ಸಾಲಿನ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಸಮಸ್ತ ಸಮುದಾಯ ಬಂಧುಗಳಿಗೆ ಪ್ರೀತಿಯ ವಂದನೆಗಳು.

ಸಂಘದ ನಿಯಮಗಳ ಚೌಕಟ್ಟಿನಡಿಯಲ್ಲಿ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ್ದೇನೆಂಬ ನಂಬಿಕೆ ನನಗಿದೆ. ತಾವೆಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಿ ಪಾರದರ್ಶಕವಾಗಿ ಆಡಳಿತ ನಡೆಸಲು ಸಹಕರಿಸಿರುತ್ತೀರಿ.

2024-26ನೇ ಸಾಲಿಗೆ ನೂತನ ಆಡಳಿತ ಮಂಡಳಿ ಆಯ್ಕೆಗೊಂಡಿದೆ. ನೂತನ ಅಧ್ಯಕ್ಷರಾಗಿ ಆಡಳಿತದ ಚುಕ್ಕಾಣಿ ಹಿಡಿದಿರುವ **ಸಿಎ ಅಶೋಕ ಶೆಟ್ಟಿ ಎಂ., ಉಪಾಧ್ಯಕ್ಷ ಸಂತೋಷ್ ಶೆಟ್ಟಿ ಜಿ, ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಕಾಂತಿ ಶೆಟ್ಟಿ, ಗೌ.ಕಾರ್ಯದರ್ಶಿ ವಿಜಯ ಜಿ. ಶೆಟ್ಟಿ ಹಾಲಾಡಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ.ರೈ, ಖಜಾಂಚಿ ಅಶೋಕ್ ಕುಮಾರ್ ಶೆಟ್ಟಿ ಹೆಚ್**. ಹಾಗೂ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು

ದಿನಾಂಕ : 27-07-2024 ರಂದು ನಡೆದ ವಾರ್ಷಿಕ ಮಹಾ ಸಭೆಗೆ ಆಗಮಿಸಿ ಸೂಕ್ತ ಸಲಹೆ-ಸೂಚನೆ ನೀಡಿದ ಸದಸ್ಯ ಬಾಂಧವರೆಲ್ಲರಿಗೂ ಪ್ರೀತಿಯ ವಂದನೆಗಳು.

ಹಾಗೆಯೇ ಚುನಾವಣಾ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕ ಹಾಗೂ ಶಿಸ್ತು ಬದ್ಧವಾಗಿ ಆಯೋಜಿಸಲು ಸಹಕರಿಸಿದ ನಿಕಟಪೂರ್ವ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಚುನಾವಣಾಧಿಕಾರಿಗಳಾದ **ಪವನ್ ಕುಮಾರ್ ಎಸ್.**, ಮತ್ತು ಚುನಾವಣೆಗೆ ಅಗತ್ಯವಿರುವ ತಾಂತ್ರಿಕ ಉಪಕರಣಗಳನ್ನು ವ್ಯವಸ್ಥೆ ಮಾಡಿ ಕೊಟ್ಟ **ಜೈದೀಪ್** ಮತ್ತು ಅವರ ತಂಡದವರಿಗೆ ಹಾಗೂ ಚುನಾವಣಾ ಸಮಿತಿಯ ಎಲ್ಲಾ ಸದಸ್ಯರಿಗೂ ಹಾಗೂ ನಮ್ಮ ಸಂಘದ ಮತ್ತು ಆರ್. ಎನ್.ಎಸ್. ವಿದ್ಯಾನಿಕೇತನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಅನಂತ ಅನಂತ ವಂದನೆಗಳು

ಇಂತಿ ತಮ್ಮ ಪ್ರೀತಿಯ,
**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ
2022-2024

# ನೂತನ ಗೌರವ ಕಾರ್ಯದರ್ಶಿಯವರ ಮಾತು



**ಸಂಘದ ಸರ್ವ ಸದಸ್ಯರಿಗೂ 78ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು ಹಾಗೂ ಗಣೇಶ ಚತುರ್ಥಿ ಹಬ್ಬದ ಹಾರ್ದಿಕ ಶುಭಾಶಯಗಳು.**

ಬಂಟ ಸಮಾಜದ ಮೇಲಿರುವ ಪ್ರೀತಿ, ಅದಮ್ಯ ಸೆಳೆತ, ಕಾರ್ಯನಿರ್ವಹಿಸುವ ತುಡಿತದ ಫಲವಾಗಿ ಈ ಬಾರಿ ಅವಿರೋಧವಾಗಿ ಆಯ್ಕೆಯಾಗಿ, ಸಮಾಜದಲ್ಲಿ ಇನ್ನಷ್ಟು ಕಾರ್ಯ ನಿರ್ವಹಿಸಲು ಸಮಾಜ ಬಾಂಧವರು ಅವಕಾಶ ಮಾಡಿಕೊಟ್ಟಿದ್ದಾರೆ.

2024–26 ರ ಆಡಳಿತ ಮಂಡಳಿಯ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತವಾಗಿ, ಸೌಹಾರ್ದಯುತವಾಗಿ ಹಾಗೂ ಸುಲಲಿತವಾಗಿ ನಡೆಸಿಕೊಟ್ಟ ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೂ ಧನ್ಯವಾದಗಳು.

ಹೊಸ ಆಡಳಿತ ಮಂಡಳಿಯನ್ನು ಪ್ರಜ್ಞಾವಂತ ಮತದಾರರಾದ ತಾವು ಆರಿಸಿ ಕಳುಹಿಸಿರುತ್ತೀರಿ. ತಮ್ಮೆಲ್ಲರಿಗೂ ವಂದನೆಗಳು. ನಮ್ಮ ಅಧಿಕಾರದ ಅವಧಿಯಲ್ಲಿ ಇನ್ನಷ್ಟು ಸಮಾಜಮುಖಿ ಕಾರ್ಯಗಳು ಹಾಗೂ ಬಂಟ ಸಮಾಜದ ಅಭಿವೃದ್ಧಿಗಾಗಿ ನನ್ನ ಸಾರ್ಥಕದ ಶ್ರಮ ಹೀಗೆ ಮುಂದುವರಿಯುತ್ತದೆ ಎಂಬ ಆಶಯ ನನ್ನದು. ಬಂಟರ ಸಮುದಾಯದಲ್ಲಿ ಇನ್ನಷ್ಟು ಕಾರ್ಯಪ್ರವೃತ್ತರಾಗಲು ನೀವು ಮಾಡಿದಂತಹ ಆಶೀರ್ವಾದ ನಮಗೆ ದಾರಿದೀಪವಾಗಿದೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ. ಸಮಾಜಮುಖಿ ಚಿಂತನೆ, ಸಮಾಜೋದ್ಧಾರಕ ಕೆಲಸ ಕಾರ್ಯಗಳಿಗೆ ನೀವು ಕೊಟ್ಟ ಪ್ರೇರಣೆ ಹಾಗೂ ಮುಂದಿನ ಎರಡು ವರ್ಷಗಳಲ್ಲಿ ತಮ್ಮ ಮಾಗದರ್ಶನ ನಮಗೆ ನಿರಂತರವಾಗಿರಲಿ. ಬಂಟರ ಸಂಘ ಹಾಗೂ ಸಮುದಾಯ ನಮ್ಮೆಲ್ಲರ ಪಾಲಿನ ಆದ್ಯತೆಯಾಗಿರಲಿ. ನಾವೆಲ್ಲರೂ ಒಂದು ಎಂಬ ಭಾವಯಾನ ನಿರಂತರವಾಗಿರಲಿ. ಸರ್ವರಿಗೂ ಶುಭವಾಗಲಿ.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ, ಶೆಟ್ಟಿ ಹಾಲಾಡಿ**
ಗೌರವ ಕಾರ್‍ಯದರ್ಶಿ
2024–26

## ಬಂಟರ ಸಂಘ ಬೆಂಗಳೂರು

ನಂ. 324, ಬಂಟರ ಸಂಘದ ಸಂಕೀರ್ಣ, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು – 560040
ದೂರವಾಣಿ: 23399635 /23399323



### ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ
### ಗಣೇಶ ಚತುರ್ಥಿ ಆಚರಣೆ

**ದಿನಾಂಕ: 07.09.2024, ಶನಿವಾರ**

ಆಸ್ತಿಕ ಬಂಧುಗಳೇ,
ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದಲ್ಲಿ 'ಗಣೇಶ ಚತುರ್ಥಿ'ಯನ್ನು ದಿನಾಂಕ 07.09.2024, ಶನಿವಾರದಂದು ಭಕ್ತಿಪೂರ್ವಕವಾಗಿ, ವಿಶೇಷ ಪೂಜಾಲಂಕಾರದೊಂದಿಗೆ ನಡೆಯಲಿದೆ.

**ಕಾರ್ಯಕ್ರಮಗಳ ವಿವರ:**

| | |
|---|---|
| ಪೂರ್ವಾಹ್ನ : 8.00 ಗಂಟೆಗೆ | : ವಿಶೇಷ ಪಂಚಾಮೃತ ಅಭಿಷೇಕ |
| ಪೂರ್ವಾಹ್ನ : 10.00 ಗಂಟೆಗೆ | : ಗಣಪತಿ ಹೋಮ |
| ಪೂರ್ವಾಹ್ನ : 10.30 ಗಂಟೆಗೆ | : ಗಣಪತಿ ಪ್ರಾಣ ಪ್ರತಿಷ್ಠೆ, ಕಲ್ಪೋಕ್ತ ಪೂಜೆ |
| ಪೂರ್ವಾಹ್ನ : 11.00 ಗಂಟೆಗೆ | : ಭಜನಾ ಕಾರ್ಯಕ್ರಮ |
| ಮಧ್ಯಾಹ್ನ : 12.00 ಗಂಟೆಗೆ | : ಮಹಾಮಂಗಳಾರತಿ ಮತ್ತು ಪ್ರಸಾದ ವಿತರಣೆ |
| ಮಧ್ಯಾಹ್ನ : 1.00 ಗಂಟೆಗೆ | : ಅನ್ನಸಂತರ್ಪಣೆ |
| ಮಧ್ಯಾಹ್ನ : 2.00 ಗಂಟೆಗೆ | : ಯಕ್ಷಗಾನ ಮತ್ತು ಮನೋರಂಜನಾ ಕಾರ್ಯಕ್ರಮಗಳು |

ಈ ಎಲ್ಲಾ ಪೂಜಾಕಾರ್ಯಗಳಲ್ಲಿ ಭಕ್ತಾಧಿಗಳು ತನು, ಮನ, ಧನ, ಸಹಾಯದಿಂದ ಸಕುಟುಂಬ ಸಮೇತರಾಗಿ ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ ತಮಗೆ ಆದರದ ಸ್ವಾಗತವನ್ನು ಕೋರುವ,

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಪ್ರಸಾದ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಕ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು**

ವಿ.ಸೂ: **'ಅಭಿಷೇಕ'** ಮಾಡಿಸುವ ಭಕ್ತಾದಿಗಳು ರೂ. 101/–ನ್ನು **'ಗಣಹೋಮ'** ಮಾಡಿಸುವವರು ರೂ. 151/–ನ್ನು ಸಂಘದ ಕಛೇರಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

# "ಅಯೋಧ್ಯೆ"– ಪುರಾಣ ಕಾಲದ ರಾಮರಾಜ್ಯ...?



ಎ. ಗಿರೀಶ ರೈ

ಪುರಾಣ ಪ್ರಸಿದ್ಧ ಸೂರ್ಯವಂಶವನ್ನು ತ್ರೇತಾಯುಗದಲ್ಲಿ 'ಕೋಸಲ' ರಾಜ್ಯದ ರಾಜ ಇಕ್ಷ್ವಾಕು ಹೆಸರಿನ ರಾಜ ಪ್ರಾರಂಭಿಸಿದ್ದು. ಈ ವಂಶದ ರಾಜರೆಲ್ಲರೂ ಪರಿಶುದ್ಧರಾಗಿದ್ದು, ಪ್ರಜೆಗಳ ಪ್ರೀತಿ – ಪ್ರೇಮ ಅಭಿಮಾನ ಪಾತ್ರರಾಗಿದ್ದರು. ರಾಜ ದಶರಥ ಈ ವಂಶದ 78ನೇ ಮಹಾರಾಜರಾಗಿದ್ದರು. ಕೋಸಲ ರಾಜ್ಯವನ್ನು ಕ್ರಮೇಣ ಅಯೋಧ್ಯೆ ಎಂದು ಹೆಸರಿಸಲಾಯಿತು. ಕವಿ ಕಾಳಿದಾಸನ 'ರಘುವಂಶ'ದಲ್ಲಿ ಇದೆಲ್ಲದರ ವಿಸ್ತೃತ ಉಲ್ಲೇಖವಿದೆ.

ಸೂರ್ಯವಂಶದ ರಾಜರೆಲ್ಲರೂ ಹುಟ್ಟಿನಿಂದಲೇ ಪರಿಶುದ್ಧರು. ಸದಾ ಸತ್ಯವನ್ನೇ ನೋಡಬೇಕು, ನುಡಿಯಬೇಕೆಂದು ಸಂಕಲ್ಪ ಹೊಂದಿದ್ದ ರಾಜರುಗಳು, ಕೀರ್ತಿಗೋಸ್ಕರ ಮಾತ್ರ ಶೌರ್ಯ ಪ್ರದರ್ಶಿಸುತ್ತಿದ್ದರು. ರಾಜ್ಯದ ಸಂಪತ್ತನ್ನು ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ಮಾತ್ರ ವಿನಿಯೋಗಿಸುತ್ತಿದ್ದರು. ರಾಜರ ಸಹಾಯ ಕೋರಿ ಬರುವ ಪ್ರಜೆಗಳಿಗೆ ಸಹಾಯ ನೀಡುತ್ತಿದ್ದರು. ರಾಜ್ಯದಲ್ಲಿ ಯಾರೇ ಅಪರಾಧವೆಸಗಿದ್ದರೆ ಸರಿಯಾದ ಶಿಕ್ಷೆ ವಿಧಿಸಲಾಗುತ್ತಿತ್ತು. ಈ ವಂಶದ ಎಲ್ಲಾ ರಾಜರು ತಮಗೆ ದೊರಕಿದ ಅಧಿಕಾರವನ್ನು ಸ್ವಾರ್ಥಕ್ಕಾಗಿ ಬಳಸದೇ, ಪ್ರಜೆಗಳ ಸೌಲಭ್ಯಕ್ಕೆ ಸಹಾಯ, ಆಸರೆ ನೀಡಲು ದೇವರು ನೀಡಿರುವ ಕರ್ತವ್ಯವೆಂದು ಭಾವಿಸುತ್ತಿದ್ದರು. ರಾಜ್ಯದ ಮಂತ್ರಿಗಳ ಮಕ್ಕಳೇನಾದರು ಅಪರಾಧ ಮಾಡಿದ್ದರೆ, ಅವರಿಗೂ ಶಿಕ್ಷೆ ವಿಧಿಸಲಾಗುತ್ತಿತ್ತು. ಅಂತೆಯೇ ರಾಜಮನೆತನ ಮುಂದುವರಿಯಲು ಸಂತಾನಕ್ಕಾಗಿ ಗೃಹಸ್ಥರಾಗುತ್ತಿದ್ದರು.

**ವಿಧೇಹ–ಮಿಥಿಲ** : ಸರಿಸುಮಾರು ಇದೇ ಕಾಲಘಟ್ಟದಲ್ಲಿ ಪಕ್ಕದ ರಾಜ್ಯ ಮಿಥಿಲ ವಿಧೇಹ ದೇಶದಲ್ಲಿ ಜನಕರಾಜರು ರಾಜ್ಯಭಾರ ಮಾಡುತ್ತಿದ್ದರು. ಈ ರಾಜ್ಯದ ಜನರೆಲ್ಲರೂ ಕೃಷಿಕರಾಗಿದ್ದು, ಮಳೆಗಾಲದಲ್ಲಿ ಪ್ರಥಮ ಮಳೆ ಬಂದ ಒಡನೆ ಉಳುಮೆ ಪ್ರಾರಂಭವಾಗುತ್ತಿತ್ತು. ಅಲ್ಲಿನ ಪದ್ಧತಿಯಂತೆ ಸ್ವತ: ಮಹಾರಾಜರೇ ಪ್ರಥಮವಾಗಿ ನೇಗಿಲು ಹಿಡಿದು ಗದ್ದೆಯನ್ನು ಉಳುತ್ತಿದ್ದರು. ಇದರಂತೆ ಮಳೆಯಾದ ನಂತರ ಉಳುತ್ತಿದ್ದ ರಾಜರ ನೇಗಿಲಿಗೆ ಏನೋ ತಡೆದಂತಾಯಿತು. ರಾಜರು ಯಾವುದೋ ಕಲ್ಲೊಂದು ತಡೆದಿರಬಹುದೆಂದು ಭಾವಿಸಿ, ರೈತರಲ್ಲಿ ಆ ಜಾಗವನ್ನು ಅಗೆಯಲು ಸೂಚಿಸಿದರು. ಆಗ ಅಲ್ಲೊಂದು ಪೆಟ್ಟಿಗೆ ದೊರಕಿದ್ದು, ಅದನ್ನು ತೆಗೆದು ನೋಡಿದಾಗ ಅದರೊಳಗೆ ಪುಟ್ಟ, ಅತ್ಯಂತ ಸುಂದರವಾದ ಹೆಣ್ಣುಮಗುವೊಂದು ದೊರಕಿತು. ಜನಕರಾಜನಿಗೆ ಮಕ್ಕಳಿಲ್ಲವೆಂಬ ಕೊರತೆ ಇದ್ದು, ಇದು ದೇವರೇ ನೀಡಿದ ಮಗುವೆಂದು ಭಾವಿಸಿ, ಅತ್ಯಂತ ಸಂತೋಷದಿಂದ ಮಗುವನ್ನು ಅರಮನೆಯಲ್ಲಿ ತನ್ನ ಮಗಳೆಂದು ಸಾಕುತ್ತಿದ್ದರು. ಆ ಮಗುವಿಗೆ ಸೀತೆ, ಜಾನಕಿ ಮೊದಲಾದ ಹೆಸರಿಟ್ಟಿದ್ದರು. ಜನಕರಾಜನ ಮಗಳು ಅತ್ಯಂತ ಸುಂದರವಾಗಿ ಬೆಳೆದು ದೊಡ್ಡವಳಾದಳು.

ಸುರಸುಂದರಿಯಾದ ಮಗಳನ್ನು ರಾಜರು, ಅತ್ಯಂತ ಸುಂದರ, ಯೋಗ್ಯ, ಪರಾಕ್ರಮಿ ರಾಜಕುಮಾರನೊಂದಿಗೆ ಮದುವೆ ಮಾಡಬೇಕೆಂದು ತೀರ್ಮಾನಿಸುತ್ತಾರೆ. ಜನಕರಾಯನ ವಂಶದಲ್ಲಿ ಪುರಾತನ ಕಾಲದಿಂದಲೂ ಒಂದು ಬಲಿಷ್ಠ ಮತ್ತು ನೂರಾರು ಮಂದಿ ಒಟ್ಟಿಗೇ ಎತ್ತಿದರೂ ಮೇಲೇಳದ 'ಶಿವ ಧನುಸ್ಸು' ಇತ್ತು. ಅರಮನೆಯಲ್ಲಿರುವ ಶಿವಧನುಸ್ಸನ್ನು ಯಾವ ರಾಜಕುಮಾರ ಎತ್ತಿ ಮುರಿಯುತ್ತಾನೋ, ಆತನಿಗೆ ಮಗಳನ್ನು ಧಾರೆಯೆರೆದು ನೀಡಲಾಗುವುದೆಂದು ದೇಶ–ವಿದೇಶಗಳಲ್ಲಿ ಡಂಗುರ ಸಾರಿಸಲಾಯಿತು. ಈ ಮಾಹಿತಿಯಂತೆ ನೂರಾರು ದೇಶಗಳಿಂದ ಆಕಾಂಕ್ಷಿಗಳು ಮಿಥಿಲಾನಗರಕ್ಕೆ ಬಂದಿಳಿದರು.

ಮಹರ್ಷಿ ವಿಶ್ವಾಮಿತ್ರರು ತಮ್ಮ ಆಶ್ರಮದಲ್ಲಿ ಯಜ್ಞ ಯಾಗಾದಿಗಳಿಗೆ ಅಡಚಣೆ ಉಂಟುಮಾಡಿ ಉಪದ್ರ ನೀಡುತ್ತಿರುವ ರಾಕ್ಷಸರಿಂದ ರಕ್ಷಣೆ ನೀಡಲು ದಶರಥ ಮಹಾರಾಜನ ಬಳಿ ತೆರಳಿದ್ದರು. ವಸಿಷ್ಠರ ಸಲಹೆಯಂತೆ ರಾಮ ಮತ್ತು ಲಕ್ಷ್ಮಣರಿಬ್ಬರನ್ನು ಕರೆದುಕೊಂಡು ಮಿಥಿಲೆಯ ಹತ್ತಿರದಿಂದ ತಮ್ಮ ಆಶ್ರಮಕ್ಕೆ ಹಿಂತಿರುಗುತ್ತಿದ್ದರು. ಸ್ವಯಂವರದ ಮಾಹಿತಿ ಪಡೆದ ವಿಶ್ವಾಮಿತ್ರರು ರಾಮ–ಲಕ್ಷ್ಮಣರೊಂದಿಗೆ ಅಲ್ಲಿಗೆ ಬಂದಿದ್ದರು. ನಿಗದಿತ ದಿನದಂದು, ಸ್ವಯಂವರ ಮಾಡುವ ಮಂಟಪವನ್ನು ಅಲಂಕರಿಸಿದ್ದು, ಅಲ್ಲಿ ಶಿವ ಧನುಸ್ಸಿನ ಪಕ್ಕದಲ್ಲಿ ಆಕಾಂಕ್ಷಿಗಳನ್ನು ಕುಳ್ಳಿರಿಸಲಾಯಿತು. ಒಬ್ಬೊಬ್ಬ ರಾಜಕುಮಾರರನ್ನು ಕರೆದು ಶಿವಧನುಸ್ಸನ್ನು ಮೇಲೆತ್ತುವಂತೆ ಸೂಚಿಸಲಾಯಿತು. ಅವರೆಲ್ಲರೂ ಶಿವಧನುಸ್ಸನ್ನು ಮೇಲೆತ್ತಲಾರದೆ, ಸೋತೆವೆಂದು ಅವಮಾನದಿಂದ ತಮ್ಮ ಆಸನದ ಕಡೆಗೆ ನಿರಾಸೆಯಿಂದ ಹಿಂತಿರುಗಿ ಬರುತ್ತಿದ್ದರು. ಈ ನಡುವೆ ಲಂಕೇಶ್ವರ ತಾನು ಖಂಡಿತ ಇದನ್ನು ಮೇಲೆತ್ತುತ್ತೇನೆಂದು ಧನುಸ್ಸಿನ ಹತ್ತಿರ ಬಂದು ಅದನ್ನು ಎತ್ತಲು ಪ್ರಾರಂಭಿಸುತ್ತಾನೆ. ಕೊನೆಗೊಮ್ಮೆ ಧನುಸ್ಸನ್ನು ಎತ್ತಲು ಹೋಗಿ ತಾನೇ ನೆಲದಲ್ಲಿ ಬೀಳಬೇಕಾಯ್ತು. ಅತ್ಯಂತ ಅವಮಾನಗೊಂಡ ಲಂಕೇಶ್ವರನು ನಾಚಿಕೆಯಿಂದ ಕೂಡಲೇ ತನ್ನ ರಾಜ್ಯಕ್ಕೆ ಪುಷ್ಪಕ ವಿಮಾನದಲ್ಲಿ ತೆರಳಿದನು.

ಇಂತಹ ಸನ್ನಿವೇಶದಲ್ಲಿ ಯಾರೊಬ್ಬರಿಂದಲೂ ಶಿವಧನುಸ್ಸನ್ನು ಅಲುಗಾಡಿಸಲು ಸಾಧ್ಯವಾಗದಿದ್ದಾಗ, ವಿಶ್ವಾಮಿತ್ರರು ಶ್ರೀರಾಮನ ಕಡೆಗೆ ಬೆರಳು ತೋರಿಸಿ, ಧನುಸ್ಸನ್ನು ಮೇಲೆತ್ತಲು ಪ್ರಯತ್ನ ಮಾಡಲು ಹೇಳುತ್ತಾರೆ. ಶ್ರೀರಾಮ ಶಿವಧನುಸ್ಸಿನ ಹತ್ತಿರ ಹೋಗಿ ತನ್ನ ಬಲಕೈಯಿಂದ ಧನುಸ್ಸನ್ನು ಮೇಲೆತ್ತಿ, ತದನಂತರ ಅದನ್ನು ಕೆಳಗೆ ಹಾಕಿದಾಗ ಧನುಸ್ಸು ಮುರಿದು ತುಂಡಾಯಿತು. ಸಭೆಯಲ್ಲಿದ್ದವರೆಲ್ಲರೂ ಹರ್ಷೋದ್ಘಾರ ಮಾಡಿದರು. ವಿಶ್ವಾಮಿತ್ರರು ಶಿವಧನುಸ್ಸನ್ನು ಮೇಲೆತ್ತಿದವನನ್ನು ಕೋಸಲ ದೇಶದ ಮಹಾರಾಜ ದಶರಥನ ಮಗ ಶ್ರೀರಾಮ ಎಂದು ತಿಳಿಸಿದರು. ಈ ಮಾತನ್ನು ಕೇಳಿ ಎಲ್ಲರೂ ಹರ್ಷಿತರಾದರು. ಅಯೋಧ್ಯೆಗೆ ಈ ಶುಭವಾರ್ತೆಯನ್ನು ತಿಳಿಸಲಾಯಿತು. ಮಹಾರಾಜ ದಶರಥ, ರಾಜಕುಮಾರ ಭರತ ಮತ್ತು ಶತ್ರುಘ್ನರನ್ನು ಕೂಡಿಕೊಂಡು ಮಿಥಿಲಾನಗರಕ್ಕೆ ಪರಿವಾರದವರೊಂದಿಗೆ ಆಗಮಿಸಿದರು.

ಅಯೋಧ್ಯೆಯಿಂದ ರಾಜ ದಿಬ್ಬಣ ಬಂದ ನಂತರ ಶುಭಮುಹೂರ್ತದಲ್ಲಿ ಶ್ರೀರಾಮ ಮತ್ತು ಸೀತಾದೇವಿ, ರಾಜಕುಮಾರ ಲಕ್ಷ್ಮಣ ಮತ್ತು ಊರ್ಮಿಳಾ, ರಾಜಕುಮಾರ ಭರತ ಮತ್ತು ಮಾಂಡವಿ ಹಾಗೂ ರಾಜಕುಮಾರ ಶತ್ರುಘ್ನ ಮತ್ತು ಶ್ರುತಕೀರ್ತಿ ರಾಜನ ಸಹೋದರನ ಮಗಳ ವಿವಾಹ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು.

**ಅಂದಿನ ಅಯೋಧ್ಯೆ:** ಅಯೋಧ್ಯೆಯ ರಸ್ತೆಗಳು ಅಗಲವಾಗಿದ್ದು, ಪ್ರತೀ ದಿನ ನೀರು ಚಿಮುಕಿಸಿ ಸ್ವಚ್ಛಗೊಳಿಸಿ ನಂತರ ಹೂವುಗಳನ್ನು ಹರಡುತ್ತಿದ್ದರು. ಶುಚಿಯಾದ ಸಿಹಿನೀರು ದೊರೆಯುತ್ತಿತ್ತು. ಪ್ರಜೆಗೆಳಿಗೆ ಸರಕಾರ ಕಲ್ಪಿಸಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ನೀಡಿರುವುದನ್ನು ಈ ಮಹಾಕಾವ್ಯ ವಿವರಿಸಿದ್ದು ಸುಂದರವಾಗಿದೆ. ಪ್ರಜೆಗಳು ಸ್ವಂತ ಸಂಪಾದನೆಯಿಂದ ತೃಪ್ತರಾಗಿದ್ದು ಇತರರ ಹಣಕ್ಕೆ ಹಂಬಲಿಸುತ್ತಿರಲಿಲ್ಲ. ಅಯೋಧ್ಯೆಯಲ್ಲಿ ಕ್ರೂರಿಗಳಾಗಲಿ, ಕಾಮುಕರಾಗಲಿ ಇರಲಿಲ್ಲ. ಅಲ್ಲಿ ಮಂತ್ರಿಗಳ ಮಕ್ಕಳಾಗಲೀ, ಅಧಿಕಾರಸ್ಥರ ಸಂಬಂಧಿಗಳಾಗಲೀ ಅಪರಾಧಿಗಳಾಗಿದ್ದರೆ ಶಿಕ್ಷಿಸಲಾಗುತ್ತಿತ್ತು.

ಅಯೋಧ್ಯೆಯಲ್ಲಿ ಜನರ ಸಂಸ್ಕೃತಿ ಯಾವಾಗಲೂ ವೀಣೆ, ಮದ್ದಲೆ, ಮೃದಂಗ ಮುಂತಾದ ವಾದ್ಯಗಳ ಸುಮಧುರ ಧ್ವನಿ ಕೇಳುತ್ತಿತ್ತು. ಸುಳ್ಳು ಮಾತನಾಡುವವರು ಯಾರೂ ಇರಲಿಲ್ಲ. ಜನರೆಲ್ಲರೂ ಉತ್ತಮವಾದ ಬಟ್ಟೆಗಳನ್ನು ಧರಿಸಿ, ಮೈಗೆ ಶ್ರೀಗಂಧವನ್ನು ಲೇಪಿಸಿಕೊಳ್ಳುತ್ತಿದ್ದರು. ಇದು ಅಲ್ಲಿಯ ಪ್ರಜೆಗಳ ಸಂಸ್ಕೃತಿಯ ದ್ಯೋತಕ. ಅಯೋಧ್ಯೆಯಲ್ಲಿ ಶುಭ್ರವಾದ ಬಿಳಿಯ ಅಕ್ಕಿ, 'ಶಾಲಿತಂಡುಲ' ದೊರೆಯುತ್ತಿತ್ತು. ಅಕ್ಕಿ ಆ ಕಾಲದ ಪ್ರಧಾನ ಆಹಾರ ಧಾನ್ಯವಾಗಿತ್ತು. ಮಹಾಕಾವ್ಯವೊಂದು ಅಕ್ಕಿಯ ತಳಿಯನ್ನು ಮತ್ತು ಆನೆಯ ಪ್ರಭೇದಗಳನ್ನು ನೀಡಿರುವುದು ಮಹತ್ವವಾಗಿದೆ. ಕವಿ ಪಂಪ ಪರಿಮಳಭರಿತ ಅಕ್ಕಿ ನವಶಾಲಿ (ಗಂಧಸಾಲೆ) ಕುರಿತು ಉಲ್ಲೇಖಿಸಿರುವುದು ಗಮನಾರ್ಹ.

ಅಯೋಧ್ಯೆಯ ಪ್ರಜೆಗಳೆಲ್ಲರು ಸಂತೃಪ್ತರಾಗಿದ್ದರು. ಅವರಲ್ಲಿ ಯಾವುದೇ ತರದ ನಕಾರಾತ್ಮಕ ಭಾವನೆ ಇರಲಿಲ್ಲ. ಎಲ್ಲಿ ನೋಡಿದರೂ ಉಲ್ಲಾಸ, ಆನಂದದಿಂದಿರುವುದು ಸ್ಪಷ್ಟವಾಗಿ ತೋರುತ್ತಿತ್ತು. ತುಳು 'ರಾಮಾಯಾಣ' ದಲ್ಲಿ "ಓಲ್ ತೂಯಿನಾಂಡಲ ಮದಿಮೆ– ಮಂಜಿಲದ ಗೌಜಿ– ಮದಿಮಲಾಯಿ ಮದಿಮೆದ ಗೌಜಿ" ಎಂದಿದೆ. ಪ್ರಜೆಗಳ ಸಮೃದ್ಧಿ ರಾಜ್ಯದ ನಾಗರಿಕತೆಯ ಮಾನದಂಡ.

ರಾಮಾಯಣ ಲಾಲಿತ್ಯ ಪೂರ್ಣವಾಗಿದೆ. ಮಹಾಭಾರತ ರಾಮಾಯಣದಂತೆಯೇ ಜನಪ್ರಿಯವಾಗಿದೆ. ಭಗವದ್ಗೀತೆ ಮಹಾಭಾರತದ ಭಾಗವಾಗಿದೆ. ರಾಮಾಯಣ ಶ್ರೀರಾಮನ ಪರಿಪಕ್ವತೆಯ ದಿಸೆಯಲ್ಲಿ, ಮಹಾಭಾರತ ಮನುಕುಲದ ಪ್ರಯಾಣದ ವಿವರಣೆ ಇದೆ.

ನಾಗರೀಕತೆಯ ಪ್ರಾರಂಭದಿಂದ ಮತ ಧರ್ಮಗಳಿಂದ ಜನ ಜೀವನದಲ್ಲಿ ಪ್ರಭಾವ ಬೀರಿವೆ. ಆಹಾರ, ಧಾನ್ಯ, ವೇಷಭೂಷಣ, ಮದುವೆ, ಶಿಕ್ಷಣ, ರಾಜನೀತಿ ಪ್ರಭಾವ ಬೀರಿವೆ. ಸ್ವಾಮಿ ವಿವೇಕಾನಂದರು ಧರ್ಮವು ಮನುಷ್ಯನನ್ನು ಉತ್ತಮನನ್ನಾಗಿ ಮಾಡಿತು ಎಂದು ನುಡಿದಿದ್ದರು. ಧರ್ಮೋ ರಕ್ಷತಿ ರಕ್ಷಿತ: ಎನ್ನುತ್ತದೆ ಮನುಸ್ಮೃತಿ. ಹಿಂದೂ ಧರ್ಮದ ನೆಲೆಗಟ್ಟು ಸತ್ಯ ಮತ್ತು ಅಹಿಂಸೆಗಳಲ್ಲಿದೆ ಎಂದು ಹೇಳಿದ್ದರು ಗಾಂಧೀಜಿ.

ರಾಜನಿಗೆ ರಾಜತ್ವವನ್ನು ಪ್ರಜೆಗಳು ನೀಡುತ್ತಿದ್ದು, ರಾಜ ಪ್ರಜೆಗಳನ್ನು ರಕ್ಷಿಸುವುದು ಧರ್ಮ. ಜನರ ಹಿತಾಸಕ್ತಿಗಳನ್ನು ಕಾಪಾಡುವ ಧರ್ಮ, ರಾಜನೀತಿ ಅಂದಿನ ಸಂವಿಧಾನವೆಂದರೆ ಅತಿಶಯೋಕ್ತಿಯಲ್ಲ. ಈ ಅಭಿಜಾತ ಮಹಾಕೃತಿಗಳು ಪ್ರಜೆಗಳು ರಾಜರಿಗೆ ನೀಡುವ ಗೌರವವನ್ನು ಕಾಪಾಡಿಕೊಂಡರು ಎಂಬ ವಿವರಗಳನ್ನು ನೀಡುತ್ತವೆ. ದಶರಥ ಮಹಾರಾಜನನ್ನು ಪ್ರಜೆಗಳೆಲ್ಲ ಪ್ರೀತಿಸುತ್ತಿದ್ದರು. ರಘು ವಂಶದ ರಾಜರೆಲ್ಲರು ಪರಿಶುದ್ಧರು, ಭೂಮಂಡಲವನ್ನು ಆಳಿದವರು. ರಾಜ ಪ್ರತ್ಯಕ್ಷ ದೇವರು ಎಂದು ಪ್ರಜೆಗಳು ನಂಬಿದ್ದರು. ಪ್ರಜೆಗಳನ್ನು ಅಂತೆಯೆ ರಾಜರನ್ನು ರಕ್ಷಿಸುವುದು ಧರ್ಮ. ರಾಮಾಯಣದಲ್ಲಿ ರಾಮರಾಜ್ಯದ ಪರಿಕಲ್ಪನೆ ಇದೆಯೇ, ಈ ಹಿನ್ನಲೆಯಲ್ಲಿ ದಶರಥ ಮಹಾರಾಜನ ನಿಲುವು ಅಯೋಧ್ಯೆಯ ವರ್ಣನೆಯನ್ನು ಅರಿಯುವುದು ಅಗತ್ಯ. ಮಹಾತ್ಮಗಾಂಧೀಜಿಯವರ ಕಲ್ಪನೆಯ 'ರಾಮರಾಜ್ಯ' ಭಾರತವಾಗುವ ದಿಸೆಯಲ್ಲಿ ಪ್ರಗತಿ ಹೊಂದುತ್ತಿದೆಯೇ...!

॥..... ಕ್ರಿಚ್ಛ್ರಾದಿ ತಪಸ್ಸಿನ ಫಲ, ಜ್ಯೋತಿಷ್ಟಾದಿ ಯೋಗ ಫಲ, ಧನಕನಕ ವಸ್ತ್ರಾದಿ ಕನ್ಯಾದಾನ ಭಲವಹುದು ಮಹಾಭಾರತದಲ್ಲೊಂದು ಅಕ್ಷರವನ್ನು ಕೇಳ್ದರ್ಗೆ.....॥

# ನಮನ ನಿನಗೆ ದೇವ



ಶ್ರೀಮತಿ ನಿಮಿತಾ.ಪಿ. ಶೆಟ್ಟಿ
ಕೋಟೇಶ್ವರ

ಬರಡಾದ ಬದುಕಿನ ಹೃದಯದಾ
ನೆಲದಲ್ಲಿ ಪ್ರೀತಿ ವರ್ಷವ ಹರಿಸಿ
ಭರವಸೆಯ ಸಸಿ ಬೆಳೆಸೋ
ಮುತ್ತಿನಂದದ ಹನಿ ನೀನು

ಕಾದ ಮರುಭೂಮಿಯಂತಾದ
ಮನಸಿನ ಬೇಗೆ ಅಳಿಸಿ
ಬೊಗಸೆ ನೀರೊದಗಿಸುವ
ಓಯಸಿಸ್ ನೀನು.

ಗೊತ್ತಿಲ್ಲದೂರಿನ ಕಾರ್ಗತ್ತಲ ದಾರಿಯಲ್ಲಿ ಕಂಗೆಟ್ಟು ನಿಂತಾಗ
ಕೈ ಹಿಡಿದು ಮುನ್ನಡೆಸಿದ
ದಿವ್ಯ ದೀಪ್ತಿ ನೀನು.

ಜಗದಗದ್ದಲದೊಳಗೆ
ನನ್ನಳಲು ಕೇಳುವವರಿಲ್ಲೆಂದು ಮೌನವಾದಾಗ ಕೊರಳೊಳಗೆ
ಧ್ವನಿಯಾಗಿ ಹಾಡಾದೆ ನೀನು
ಬಾಳಸಾಗರದಲ್ಲಿ ಬೀಸಿದ ಬಿರುಗಾಳಿಗೆ ತತ್ತರಿಸಿದೀ
ಜೀವಕೆ ಮರುಜನ್ಮವಿತ್ತ
ಅಂಬಿಗನು ನೀನು.

ನಮನ ದೇವನೆ ನಿನಗೆ
ನನ್ನಾತ್ಮದಾ ನಮನ
ನಿನ್ನ ಕೃಪೆಯೊಂದಿರಲು
ಧನ್ಯವೀ ಜೀವನ.

## ಅಭಿನಂದನೆಗಳು



ಕುಂದಾಪುರ ತಾಲೂಕು ಕೆಂಚನೂರು ಸಳ್ವಾಡಿಮನೆ ಶ್ರೀಯುತ H. ಶಂಕರ ಶೆಟ್ಟಿ ಮತ್ತು 74ನೇ ಉಳ್ತೂರು ಮೇಲ್ ಕಟ್ಟಿನಬೈಲು ಶ್ರೀಮತಿ ಭಾರತಿ ಎಸ್. ಶೆಟ್ಟಿಯವರ ಮಗಳಾದ ಕುಮಾರಿ ರಶ್ಮಿ ಎಸ್. ಶೆಟ್ಟಿಯವರು 2024ನೇ ಸಾಲಿನ C.A. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರು 10ನೇ ತರಗತಿಯನ್ನು R.N.S. ಬಂಟರ ಸಂಘ ವಿಜಯನಗರ ಬೆಂಗಳೂರು ಇಲ್ಲಿ 94% ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು, P.U.C. ನ್ನು ಕ್ರೈಸ್ಟ್ ಯೂನಿವರ್ಸಿಟಿ ಬೆಂಗಳೂರು ಇಲ್ಲಿ 98% ಅಂಕಗಳೊಂದಿಗೆ ಉತ್ತೀರ್ಣರಾಗಿರುತ್ತಾರೆ ಮತ್ತು B.Com. ಪದವಿಯನ್ನು ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ಪಡೆದಿರುತ್ತಾರೆ. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

## ಪ್ರಕಟಣೆ

ಪಿ.ಯು.ಸಿ. ಅಥವಾ ತತ್ಸಮಾನ ಪದವಿಯನ್ನು ಹೊಂದಿರುವ ಅರ್ಹ ಅಭ್ಯರ್ಥಿಗಳು ಬಂಟರ ಸಂಘದ "ರಾಧಾಬಾಯಿ ತಿಮ್ಮಪ್ಪ ಭಂಡಾರಿ ಆಡಿಟೋರಿಯಂ–ಅಡುಗೆ ಮೇಲ್ವಿಚಾರಕ" (Kitchen Supervisor) ಹುದ್ದೆಗೆ ದಿನಾಂಕ 15.09.2024ರ ಒಳಗೆ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.

# Namaste: A Sacred Greeting and Its Profound Significance



Dr Santosh Shetty

In our culture, "Namaste" (pronounced \NAH-MUH-STAY\ in English), is not just a customary greeting but a profound acknowledgment of the divine spark residing within each person. It reflects the belief in the interconnectedness of all beings and the recognition of the divine presence (Atman) within oneself and others. This concept resonates with the teachings of Sanatana Dharma, which emphasises the unity of existence and the pursuit of self-realisation.

Namaste is a sacred acknowledgment of the divine within and around us, carrying deep spiritual significance and reflecting the interconnectedness of all beings. As we say Namaste, we honour the eternal wisdom and embrace the unity that binds humanity together. It is not merely a formality; it is an invitation to connect at a soul level. By practising Namaste, we cultivate humility, empathy, and gratitude. It is a way to express reverence for life, nature, and the cosmos.

The word "Namaste" originates from Sanskrit, where "Nama" means "bow," "respect," or "devotion," and "Te" means "to you." Thus, "Namaste" translates to "I bow to you" or "I bow to the divine in you." Sanskrit, the ancient and classical literary language of Hinduism / Sanātana Dharma, today serves as a learned language and lingua franca among scholars. Its roots can be traced back to ancient scriptures such as the Vedas, Upanishads, and the Bhagavad Gita, where bowing or paying respect to another being is emphasised as an expression of humility and reverence.

The traditional gesture of Namaste involves pressing the palms together and bowing. This act goes beyond a simple salutation. When we join our hands, we stimulate pressure points connected to the eyes, ears, and mind. The fingertips touching activate nerve endings, sending signals to the brain.

Namaste has its origins in ancient texts and epics:

- **Namaskara Mudra**: This hand gesture symbolises respect, humility, and surrender. It represents the merging of individual souls with the cosmic consciousness.
- **Deities and Namaste**: Devotees greet deities in temples with Namaste, recognising the divine presence in the sacred idols.
- **Surrender to the Divine Will**: In the Bhagavad Gita, Bhagwan Sri Krishna emphasises devotion and self-surrender. Namaste reflects this surrender to the divine will.
- **Reverence for Inner Wisdom**: Maa Saraswati, the goddess of knowledge and wisdom, is often depicted with hands in Namaste, signifying reverence for learning and inner wisdom.
- **Unity in Diversity**: Just as Sanatana Dharma embraces diverse paths, Namaste unites people regardless of their backgrounds.
- **Acknowledging the Divine Spark**: When we say Namaste, we honour the divine spark within each person. It is a reminder that we are all interconnected.

Our tradition is rich with instances where the gesture of "Namaste" holds profound symbolic significance. In the epic Ramayana, when Bhagwan Sri Rama meets sages, kings, and even animals during his exile, he greets them with utmost humility by folding his hands and saying "Namaste." This exemplifies the ideal of respect and humility towards all beings, regardless of their social status or species. Similarly, in the Mahabharata, people often greet each other with "Namaste," underscoring the importance of humility and respect in human interactions.

**Namaste: A Sacred Greeting and Its Profound Significance**

The essence of "Namaste" is deeply rooted in our philosophy, particularly the concept of Advaita Vedanta, which emphasises the non-dual nature of reality. According to this philosophy, there is only one ultimate reality (Brahman), and the diversity in the world is just an illusion (Maya). When we say "Namaste" to another person, it signifies the recognition of the underlying unity of existence, where the distinction between the self and the other dissolves, and only the divine essence remains.

In addition to being a verbal greeting, "Namaste" is also expressed through the gesture of Anjali Mudra, wherein the palms are pressed together in front of the chest. This gesture, known as the "Namaskar" or "Pranamasana,"(prayer pose) is commonly performed during prayers, rituals, and social interactions, symbolising the merging of the individual self with the divine and considered a gesture of respect, gratitude, and reverence.

In today's fast-paced world, where cultural boundaries are becoming increasingly blurred, the essence of "Namaste" serves as a timeless reminder of our shared humanity and interconnectedness. In a world plagued by division, conflict, and discord, the simple act of saying "Namaste" can serve as a bridge that transcends differences and fosters harmony and understanding among people of diverse backgrounds.

Let us embark on this journey—one Namaste at a time—to foster mindfulness, respect, and positive connections in our lives!

**RTB Auditorium Booking Status as on 22.08.2024**

| S. N. | Booking Date | Prog. Date | Name of Party | Booking Category Member / Non Member | Prog. Details |
|---|---|---|---|---|---|
| 1 | 18-07-2024 | 30-07-2024 | Nisha Arun Shetty | Member | Uttarakriye |
| 2 | 02-08-2024 | 05-08-2024 | Poornima Enterprises | Non-Member | Social Service |
| 3 | 02-08-2024 | 25-08-2024 | Vijaya Souharda Credit Cooperative Society ltd | Non-Member | Social Service |
| 4 | 03-08-2024 | 21-09-2024 | Telecom Employees Coop Housing Society Ltd | Non-Member | Social Service |
| 5 | 05-08-2024 | 08-08-2024 | Madan Ballal | Member | Uttarakriye |
| 6 | 09-08-2024 | 17-08-2024 | Rajashekar Ganiger | Non-Member | Social Service |
| 7 | 08-08-2024 | 21-08-2024 | Sneha College of Nursing | Non-Member | Social Service |
| 8 | 19-08-2024 | 24-08-2024 | Deepak Shetty | Member | Member's Prog. |
| 9 | 22-08-2024 | 22-09-2024 | Tulunada Jawaner | Non-Member | Coastal Event |

# ‘ಇಕಿಗಾಯಿ’ ಎನ್ನುವ ದೀರ್ಘಾಯುವಿನ ರಹಸ್ಯ



ಡಾ.ಎನ್ ಜಯರಾಮ ಶೆಟ್ಟಿ

ಪ್ರಾಯ ಹೊಂದುವುದು ಮತ್ತು ಕಾಲಗತಿಯಲ್ಲಿ ಮರಣಿಸುವುದು ಸ್ವಾಭಾವಿಕವಾದರೂ, ಮನುಜರು ಈ ವಾಸ್ತವವನ್ನು ಅಷ್ಟು ಸುಲಭದಲ್ಲಿ ಒಪ್ಪಲಾರರು. ದೀರ್ಘಾಯುಗಳಾಗಿ ಬದುಕಬೇಕೆಂಬ ಆಸೆ ನಮ್ಮಲ್ಲಿ ಪ್ರಬಲವಾದುದಾಗಿದೆ. ಆಯಸ್ಸನ್ನು ಹೆಚ್ಚಿಸಿಕೊಳ್ಳುವ ವಿಧಾನವೇನಾದರೂ ಇದೆಯೆ? ಇದ್ದರೆ ಅದೊಂದು ಆಕಸ್ಮಿಕ ವಿಷಯವೆ ಇಲ್ಲ ಪ್ರಮಾಣಿತ ಸಂಗತಿಯೆ? ‘ಇಕಿಗಾಯಿ: ದೀರ್ಘ ಮತ್ತು ಸಂತಸಕರ ಬದುಕಿನ ಜಪಾನಿಯ ಸೂತ್ರ’ ಎನ್ನುವ ಕೃತಿಯನ್ನು ಹೆಕ್ಟರ್ ಗಾರ್ಸಿಯಾ ಮತ್ತು ಫ್ರಾನ್ಸೆಸ್ ಮಿರಲ್ಲೆಸ್ ಬರೆದು ಪ್ರಕಟಿಸಿದ ತದನಂತರ, ಇಕಿಗಾಯಿ ಎನ್ನುವ ಬದುಕುವ ವಿಧಾನ ವಿಶ್ವಗಮನವನ್ನೆ ಸೆಳೆಯಿತು. ಎಂಭತ್ತು ಸಾವಿರಕ್ಕಿಂತಲೂ ಮಿಕ್ಕಿದ ಮಂದಿ ಜಪಾನಿನ ಒಂದು ಪ್ರಾಂತ್ಯದಲ್ಲಿ ನೂರು ವರ್ಷ ಮೇಲ್ಪಟ್ಟವರಂತೆ. ಇದೀಗ ಶತಾಯುಗಳಾಗುವುದು ಕಷ್ಟಸಾಧ್ಯವೇನಲ್ಲ ಎನ್ನುವ ಮಟ್ಟಿಗೆ ಇಕಿಗಾಯಿ ಸೂತ್ರವನ್ನು ಜಪಾನಿಯರು ನಂಬಿದ್ದಾರೆ ಮತ್ತು ಇತರರನ್ನು ನಂಬಿಸುತ್ತಿದ್ದಾರಂತೆ!

ಇಕಿಗಾಯಿ, ಏನಿದು? ಜಪಾನಿಯ ಭಾಷೆಯಲ್ಲಿ ಇಕಿ ಮತ್ತು ಗಾಯಿ ಎಂದರೆ ಕ್ರಮವಾಗಿ ಬದುಕು ಮತ್ತು ಮೌಲ್ಯವೆಂದರ್ಥ. ಬದುಕುವ ಕಾರಣ ಮತ್ತು ಉದ್ದೇಶ ಸ್ಪಷ್ಟ ಮತ್ತು ಪ್ರಬಲವಾಗಿರಬೇಕನ್ನುವ ಧೋರಣೆಯನ್ನು ‘ಇಕಿ’ ಸಾರುತ್ತದೆ. ಅಂತಹ ಉದಾತ್ತ ಕಾರಣದಿಂದಲೆ ಜೀವನ ಮೌಲ್ಯ ಎದ್ದು ಕಾಣುವುದಂತೆ. ಬದುಕು ಮಾತ್ರ ಅಲ್ಲ, ದೈನಂದಿನ ಪ್ರತಿಯೊಂದು ಚಟುವಟಿಕೆಯಲ್ಲೂ ‘ಇಕಿ’ ತತ್ವದ ಜೋಡಣೆಯನ್ನು ನಾವು ಕಾಣಬಹುದು. ಉದಾಹರಣೆಗೆ, ಬೆಳಗ್ಗೆ ಬೇಗ ಏಕೆ ಏಳಬೇಕು, ಇಂತಹ ಅಹಾರ ಏಕೆ ಸೇವಿಸಬೇಕು, ಜೀವನ ಕ್ರಮ ಹೀಗೆಯೇ ಏಕಿರಬೇಕು ಹೀಗೆ ಪ್ರತಿಯೊಂದು ಚಟುವಟಿಕೆ, ಘಟನೆ, ವಿಧಾನ ಮತ್ತು ಪ್ರಕ್ರಿಯೆಗೆ ಗಮನಕೊಡಲಾಗುತ್ತದೆ ಮತ್ತು ತನ್ಮೂಲಕ ಬದುಕಿಗೆ ಅರ್ಥ ಮತ್ತು ಮೌಲ್ಯವನ್ನು ತುಂಬಲಾಗುತ್ತದೆ. ಇಕಿಗಾಯಿ ಬದುಕನ್ನು ಪ್ರೀತಿಸುವಷ್ಟು ಮತ್ತು ಒತ್ತಾಸೆ ಕೊಡುವಷ್ಟು ಬೇರೆ ಯಾವ ಸೂತ್ರ ಇರಲಿಕ್ಕಿಲ್ಲ. ಇದರ ಅಳವಡಿಕೆ ನೇರವಾಗಿ ನಮ್ಮ ಬದುಕನ್ನು ಉದ್ದೀಪನಗೊಳಿಸಬಲ್ಲುದು ಮತ್ತು ತನ್ಮೂಲಕ ಜೀವಿತಾವಧಿಯನ್ನು ಹೆಚ್ಚಿಸಬಲ್ಲುದು ಎನ್ನುವುದು ಈಗ ಸಾಬೀತಾಗಿದೆ. ಇಕಿಗಾಯಿ ಸೂತ್ರ ನಾಲ್ಕು ಅಂಶಗಳನ್ನು ಎತ್ತಿ ಹಿಡಿಯುತ್ತದೆ.

ನಾವು ಪ್ರೀತಿಸುವುದು ಏನನ್ನು? ನಾವು ಯಾವುದನ್ನು ಪ್ರೀತಿಸುತ್ತೇವೆ, ನಾವದರ ಮಾಲಕರು, ಯಾವುದನ್ನು ದ್ವೇಷಿಸುತ್ತೇವೆ ನಾವದರ ಬಂಧಿಗಳು. ಬದುಕು ಮತ್ತದರ ಜವಾಬ್ದಾರಿಯನ್ನು ಮನಸಾರೆ ಸ್ವೀಕರಿಸಿ ಮುನ್ನಡೆದಾಗ, ಎಲ್ಲವೂ ಸುಗಮವಲ್ಲವೆ? ಸಮಸ್ಯೆ ಮತ್ತು ಜಟಿಲತೆ ಇರುವುದು ನಿರಾಕರಣೆಯಲ್ಲಿ ಮಾತ್ರ. ಸ್ವೀಕಾರದಲ್ಲಿ ಪ್ರತಿಕಾರಕ್ಕೆ ಎಡೆಯಿಲ್ಲವಲ್ಲ. ಇಕಿಗಾಯಿ ತತ್ವ ನಮಗೇನು ಹೊಸತಲ್ಲ. ನಮ್ಮ ಮೂಲ ತತ್ವ ‘ಸರ್ವೇ ಜನಾ: ಸುಖಿನೋ ಭವಂತು’ಇದೇ ಅಲ್ಲವೆ? ಎಲ್ಲರೂ ಸುಖಿಯಾಗಿರಲಿ, ಎಲ್ಲರಿಗೂ ಸುಖ ಶಾಂತಿ ಲಭಿಸಲಿ ಎನ್ನುವ ಆಶಯದಲ್ಲಿ ಯಾವ ಅಪಸ್ವರ, ಅನ್ಯತಾ ಭಾವ ನುಸುಳಲು ಸಾಧ್ಯ?

ನಾವು ಎಷ್ಟು ಒಳ್ಳೆಯದನ್ನು ಮಾಡಬಲ್ಲೆವು? ಇಕಿಗಾಯಿ ಪಡೆಯುವುದಕ್ಕಿಂತ ಕೊಡುವುದನ್ನು ಹೆಚ್ಚಾಗಿ ಬೆಂಬಲಿಸುತ್ತದೆ. ನಮ್ಮ ಪ್ರತಿದಿನದ ಯೋಚನೆ, ಮಾತು ಮತ್ತು ಕೆಲಸ ಇವುಗಳೇ ನಾವು ಕೊಡಬಹುದಾದ ಶ್ರೇಷ್ಠ ಕೊಡುಗೆ. ದಿನದ ಅವಧಿಯಲ್ಲಿ ನಾವೆಷ್ಟು ಸೇವೆ ಸಲ್ಲಿಸಬಲ್ಲೆವು, ನಾವೆಷ್ಟು ಮಂದಿಗೆ ಸಹಾಯಕರಾಗಿ ನಿಲ್ಲಬಲ್ಲೆವು ಈ ಅಂಶಗಳನ್ನು ನಾವು ಗಮನಿಸಬೇಕು ಮತ್ತು ಅವುಗಳನ್ನು ದಾಖಲಿಸಬೇಕು.

ಹೊರಗಿನ ಪ್ರಪಂಚದ ನಿರೀಕ್ಷೆಯೇನು? ಇಕಿಗಾಯಿ ನಮ್ಮ ಕ್ಷಮತೆ ಮತ್ತು ಸೇವಾ ತತ್ಪರತೆಯನ್ನು ಹತ್ತಿರದಿಂದ ಗಮನಿಸುತ್ತದೆ. ಮೂರು ತರಹದ ಮನೋಭಾವದವರನ್ನು

ನಾವು ಕಾಣಬಹುದು. ನನಗೇನು ಬೇಡ, ನನ್ನಿಂದ ಏನನ್ನೂ ನಿರೀಕ್ಷಿಸಬೇಡಿ ಎನ್ನುವ ಪ್ರತ್ಯೇಕತಾ ಮನೋಭಾವ ಪ್ರಕಟಿಸುವವರಿಂದ ಯಾರಿಗೆ ಏನು ಪ್ರಯೋಜನವಿದೆ ಹೇಳಿ. ಸನ್ಮಾನ್ಯ ಡಿವಿಜಿ ಅವರು ಅಂತಹವರಿಗಾಗಿಯೆ ಹೇಳಿರಬೇಕು, 'ಪ್ರತ್ಯೇಕ ಸುಖ ಅಲ್ಪದದು, ಗಳಿಕೆ ತೋರ್ಕೆಯದು'. ಎರಡನೆ ವರ್ಗದವರು ಲೆಕ್ಕವಿಟ್ಟು ವ್ಯವಹರಿಸುವವರು, ಇದರಿಂದ ನನಗೇನು ಲಾಭ ಎನ್ನುವ ಪ್ರಶ್ನೆಯನ್ನು ಮುಂದಿಟ್ಟು ಇರುವ ಮಂದಿಯಿಂದ ಹೆಚ್ಚೇನು ನಿರೀಕ್ಷಿಸಲಾಗದು. ಅಂತಹ ವ್ಯಕ್ತಿಗಳಿಂದ ತ್ಯಾಗ, ಔದಾರ್ಯ ಮತ್ತು ಕಾರುಣ್ಯವನ್ನು ಅಪೇಕ್ಷಿಸುವುದು ಕಷ್ಟಸಾಧ್ಯ. ಮೂರನೆಯ ಪಂಗಡದವರು ನಮಗಿಲ್ಲಿ ಬೇಕು. ತಮ್ಮ, ಮನಸ್ಸು, ಮಾತು ಮತ್ತು ಕೆಲಸಗಳಲ್ಲಿ ತಾದಾತ್ಮ್ಯತೆಯನ್ನು ರೂಢಿಸಿಕೊಂಡು, ಎಲ್ಲರೊಳಗೆ ಒಂದಾಗುವವರು ಅವರು. ಡಿವಿಜಿಯವರು ಅವರಿಗಾಗಿ ಹೇಳಿದ್ದು, 'ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ವಿಧಿಯ ಮಳೆಸುರಿಯೆ'. ಇಕಿಗಾಯಿ ನಿಯಮಗಳ ಪಾಲನೆಯನ್ನು ಈ ಮೂರನೆ ಪಂಗಡದ ವ್ಯಕ್ತಿಗಳಲ್ಲಿ ನಾವು ಹೆಚ್ಚಾಗಿ ಕಾಣಬಹುದಾಗಿದೆ.

ಏನನ್ನಾದರೂ ನಮಗೇಕೆ ಕೊಡಬೇಕು? ನಾವು ಕೊಡದೆ ನಮಗೇನು ದಕ್ಕದು. ಈಗ ಮಾಡುವುದನ್ನೆ ಮಾಡುತ್ತಿದ್ದರೆ, ಈಗ ಸಿಗುವುದು ಮಾತ್ರ ಸಿಕ್ಕೀತು. ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಸುಮ್ಮನೆ ಮೇಲಿನಿಂದ ಕೆಳಕ್ಕೆ ಬೀಳುವಂತಹುದಲ್ಲ. ಅವನ್ನು ನಾವು ಹೊಂದಬೇಕಾದರೆ ನಿಶ್ಚಿತ, ನಿಯಮಿತ ಮತ್ತು ಸಾಕಷ್ಟು ಶ್ರಮ ಸಲ್ಲಿಸಲೇ ಬೇಕು. ಬೆಳಗ್ಗೆ ಎದ್ದು ಹಿಂದೆ ಮುಂದೆ ನೋಡದೆ ನಡಿಗೆಗೆ ಮುಂದಾಗುವುದು ಒಂದು, ಉದಾಸೀನ ತುಂಬಿಸಿಕೊಂಡು ಹಾಸಿಗೆಯಲ್ಲೇ ಹೊರಳಾಡುವವರು ಕೆಲವರು. ಆರೋಗ್ಯ ತನ್ನಿಂತಾನೆ ಉಂಟಾಗುವುದಿಲ್ಲ, ಅದನ್ನು ರೂಢಿಸಿಕೊಂಡು ಹೊಂದಬೇಕಷ್ಟೆ? ರಸ್ತೆಯಲ್ಲಿ ಯರ್ರಾಬಿರ್ರಿ ನಡೆಯುವವರು, ಗಾಡಿ ಓಡಿಸುವವರು ಅಪಘಾತ ಆಹ್ವಾನಿಸಿಕೊಳ್ಳುವಂತೆ, ಆರೋಗ್ಯದ ಕಡೆ ಗಮನಹರಿಸದವರು ಆಸ್ಪತೆ ಕಡೆ ಸಾಗಬೇಕಾದುದು ಅನಿವಾರ್ಯವಲ್ಲವೆ?

ಕ್ರಿಸ್ತಶಕ ಏಳುನೂರರಿಂದಲೇ ಇಕಿಗಾಯಿ ಜೀವನ ಪದ್ಧತಿಯನ್ನು ಜಪಾನಿನ ಓಕಿನಾವ ಪ್ರಾಂತ್ಯದಲ್ಲಿ ಅಲ್ಲಿಯ ಮಂದಿ ಅಳವಡಿಸಿಕೊಂಡರು. ಆ ಪ್ರದೇಶದಲ್ಲಿ ಅತಿ ಹೆಚ್ಚಿನ ದೀರ್ಘಾಯು ಮಂದಿಯನ್ನು ಚರಿತ್ರೆ ದಾಖಲಿಸಿದೆ. ಇದೇನು ವಿಶೇಷ ಪ್ರಕ್ರಿಯೆ ಒಳಗೊಂಡ ಪದ್ಧತಿಯೇನಲ್ಲ. ಮೌಲ್ಯಗಳನ್ನು ಪ್ರೀತಿಸುವ, ಅಳವಡಿಸಿಕೊಳ್ಳುವ ಜೀವನ ಕ್ರಮವಿದು. ವಿಶ್ವಾದ್ಯಂತ ಇಕಿಗಾಯಿ ಮನುಕುಲಕ್ಕೆ ಪರಿಚಿತವಾಗುತ್ತಿದೆ, ಬದುಕಿಗೆ ಹತ್ತಿರವಾಗುತ್ತಿದೆ.

## CONGRATULATIONS

## International Best Physique Competition




Member of Bunts' Sangha Bangalore Shodhan Rai Won 2 GOLD, 2 SILVER for INDIA at the Body Building, Classic Physique & Athletic divisions @ the *INBA Natural Body Building's 'World championships 2024'* called "International Pacific Rim 2024" In Auckland, New Zealand.

He is qualified for the Natural Olympia 2024 in Las Vegas, USA in November which is like the Olympics of Natural Body Building.

Bunts Sangha Bangalore congratulates and wishes him all the best for his future endeavours.

# BUNTS SANGHA BANGALORE
## Matrimonial Services - August - 2024

| Boys New Profiles | | | | |
|---|---|---|---|---|
| CODE NO | DOB | HEIGHT | EDCUCATION | OCCUPATION |
| 202/B/2022 | 10.10.1988 | 6.00" | MBA (pusuing) | Tata steel |
| 202/B/2022 | 15.05.1983 | 6.00" | MA | Manager |
| 203/B/2022 | 15.11.1988 | 5.8" | M.D (Ayurvedic) | Doctor |
| 206/B/2022 | 23.09.1991 | 5.6" | BE | Project Engineer |
| 207/B/2022 | 16.03.1989 | 5.7" | D.Pharma | Retail Chemist and Wholesale Distribution |
| 209/B/2022 | 09.08.1994 | 5.8" | Diploma | |
| 211/B/2022 | 05.05.1992 | 5.8" | MD Neurology, Epilepsy Fellowship | Epilepsy Neurologist |
| 212/B/2022 | 07.04.1982 | 6.2" | MBA | |
| 213/B/2022 | 13.11.1987 | 5.5" | Degree | Business |
| 214/B/2022 | 06.09.1990 | 5.10" | B.Com | Quality Assurance |
| 215/B/2022 | 24.05.1991 | 5.7" | BE (Electronics and Communication) | Senior Engineer |
| 216/B/2022 | 07.06.1988 | 5.5" | CA Inter (Cleared Group 1) | Finance and Taxation Consultant |
| 217/B/2022 | 06.06.1986 | 5.10" | B.Com | Senior Accountant |
| 218/B/2022 | 10.08.1985 | 5.7" | 2nd PUC | Business |
| 221/B/2022 | 17.07.1991 | 5.6" | B.Com | Manager |
| 226/B/2022 | 09.12.1985 | 5.8" | SSLC | Running Canteen in Partnership in Bangalore |
| 227/B/2022 | 14.03.1985 | 6.1" | B.Com | Gateway Supervisors DHL |
| 228/B/2022 | 21.06.1991 | 5.5" | BE, MBA | Senior Consultant |
| 229/B/2022 | 04.04.1990 | | BBM | Accenture, Bangalore |
| 231/B/2022 | 13.03.1980 | 5.7" | B.Com | Accountant |
| 233/B/2022 | 07.04.1982 | 6.2" | MBA | Wealth Manager, Mutual Fund Advisor |
| 235/B/2022 | 29.03.1994 | 5.6" | BE (ECE) | Software Developer |
| 237/B/2022 | 12.05.1987 | 5.8" | B.Com | Business |
| 239/B/2022 | 30.08.1985 | 5.10" | Diploma | Business |
